# ಡಬ್ಲ್ಯುಟಿಒ- ಸಾರ್ವಜನಿಕರ ಪಾತ್ರ ಮತ್ತು ಪಾರದರ್ಶಕತೆ

ಕಳೆದ ಕೆಲವು ವರ್ಷಗಳಿಂದ ಡಬ್ಲ್ಯುಟಿಒ ಒತ್ತಡದಲ್ಲಿದೆ. ಮುಖ್ಯವಾಗಿ, ಹತ್ತು ಹಲವು ಸರ್ಕಾರೇತರ ಸ್ವಯಂಸೇವಾ ಸಂಘಟನೆ(ಎನ್‌ಜಿಒ)ಗಳು ಪ್ರಶ್ನೆಗಳನ್ನೆತ್ತುತ್ತಿವೆ. ಅವುಗಳೆಲ್ಲದರ ಕೂಗು ಪಾರದರ್ಶಕತೆಯನ್ನು ಒತ್ತಾಯಿಸುತ್ತದೆ. 1999ರ ಸಿಯಾಟಲ್‌ನ ಮೂರನೇ ಸಚಿವ ಸಭೆಯ ವೇಳೆ ಪ್ರತಿಭಟನೆ ತಾರಕಕ್ಕೇರಿತ್ತು. ಡಬ್ಲ್ಯುಟಿಒ ಕಡೆಯಿಂದ ಜವಾಬ್ದಾರಿಯ ಕೊರತೆ, ಅಪಾರದರ್ಶಕತೆ, ಅನೀತಿಗಳೇ ಎದ್ದು ಕಾಣುತ್ತಿತ್ತು. ಅಲ್ಲಿ ವ್ಯಾಪಾರದಲ್ಲಿ ಶಕ್ತಿಶಾಲಿ ಎನಿಸಿದ ರಾಷ್ಟ್ರಗಳ ಲಾಭಾಕಾಂಕ್ಷೆ, ಪ್ರಭಾವಿ ಎನ್ನಿಸಿಕೊಳ್ಳುವ ಹಪಾಹಪಿಗಳು ಕಾಣುತ್ತಿದ್ದವೇ ವಿನಃ ಸಾರ್ವಜನಿಕ ಹಿತಾಸಕ್ತಿ ಇದ್ದಂತಿರಲಿಲ್ಲ.

ಈ ಹಿನ್ನೆಲೆಯಲ್ಲಿಯೇ ಡಬ್ಲ್ಯುಟಿಒ ಬೆನ್ನಲ್ಲಿ ಟ್ಯಾಪ್(ಟಿಎಪಿ) ಕಲ್ಪನೆ ಮೂಡಿದ್ದು. ಮೂರು ವಿಷಯಗಳನ್ನು ಆಧರಿಸಿ ಈ ಕಲ್ಪನೆ ಸಾಕಾರಗೊಂಡಿದೆ. 1. ಪಾರದರ್ಶಕತೆಯ ಹಕ್ಕು 2.ನೀತಿ ನಿರೂಪಣೆಯಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯ ಅಗತ್ಯ 3. ವಿವಾದ ಇತ್ಯರ್ಥ ವ್ಯವಸ್ಥೆಯಲ್ಲಿ ಸಾರ್ವಜನಿಕರ ಪಾತ್ರ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಇಡೀ ಪ್ರಕ್ರಿಯೆಯ ಉದ್ದೇಶ ಡಬ್ಲ್ಯುಟಿಒನಲ್ಲಿ ಸಾರ್ವಜನಿಕರ ಧ್ವನಿಗೆ ಬೆಲೆ ಬರಬೇಕು ಎಂಬುದು. ಒಟ್ಟೂ ವ್ಯಾಪಾರಿ ವ್ಯವಸ್ಥೆ ನ್ಯಾಯ, ನೀತಿ, ಪ್ರಾಮಾಣಿಕತೆಯನ್ನು ಉತ್ತೇಜಿಸಬೇಕು ಎಂದಾದರೆ ಸ್ವತಃ ಡಬ್ಲ್ಯುಟಿಒ ಪಾರದರ್ಶಕ, ಪ್ರಜಾಪ್ರಭುತ್ವಾತ್ಮಕ ಮತ್ತು ಇತರ ಅಂತರ್ರಾಷ್ಟ್ರೀಯ ಆತಂಕಗಳತ್ತ ಜವಾಬ್ದಾರಿಗಳನ್ನು ಅಳವಡಿಸಿಕೊಳ್ಳಲೇ ಬೇಕಾಗುತ್ತದೆ. ಅಷ್ಟಕ್ಕೂ ಪಾರದರ್ಶಕತೆ ಎಂದರೆ ಡಬ್ಲ್ಯುಟಿಒ ವ್ಯವಸ್ಥೆಯ ದಾಖಲೆಗಳನ್ನು ಅರಿತುಕೊಳ್ಳುವ ಅವಕಾಶ, ಸರ್ಕಾರಗಳ ತೀರ್ಮಾನಗಳ ವಿವರಗಳ ಲಭ್ಯತೆ, ಡಬ್ಲ್ಯುಟಿಒ ಮಾತುಕತೆಗಳಲ್ಲಿ ಹೆಚ್ಚಿನ ಸಾರ್ವಜನಿಕರ ಪಾಲ್ಗೊಳ್ಳುವಿಕೆ.

ಡಬ್ಲ್ಯುಟಿಒಗೆ ಮುನ್ನಿನ ಗ್ಯಾಟ್ (ಜನರಲ್ ಅಗ್ರಿಮೆಂಟ್ ಆಫ್ ಟ್ಯಾರಿಫ್ಸ್ ಎಂಡ್ ಟ್ರೇಡ್)ನಲ್ಲಿ ಮುಚ್ಚಿದ ಬಾಗಿಲ ವರ್ತನೆಯಿಂದಾಗಿಯೂ ಹತ್ತು ಹಲವು ಅನುಮಾನಗಳು ಹುಟ್ಟಿಕೊಂಡಿದ್ದವು. ಗ್ಯಾಟ್ ಸಭೆಗಳಲ್ಲಿ ಸದಸ್ಯ ದೇಶದ ಪ್ರತಿನಿಧಿಗಳಷ್ಟೇ ಪಾಲ್ಗೊಳ್ಳುವ ಸೂಚನೆ ಇರುತ್ತಿತ್ತು. ಸರ್ಕಾರೇತರ ಸಾರ್ವಜನಿಕ ಸಂಘಟನೆ ಮತ್ತು ಇತರ ಆಸಕ್ತ ಗುಂಪುಗಳು ಯಾವುದೇ ರೀತಿಯಲ್ಲಿ ಪಾಲ್ಗೊಳ್ಳಲು ಅವಕಾಶವಿರಲಿಲ್ಲ. ದೇಶದ ಪ್ರತಿನಿಧಿಗಳಿಗೇ ಚರ್ಚೆ, ಪ್ರಾತಿನಿಧ್ಯ, ಒಪ್ಪಂದಗಳ ಸಂಬಂಧದ ಎಲ್ಲ ಅಧಿಕಾರ ಕೇಂದ್ರೀಕೃತವಾಗಿತ್ತು.

1995ರಲ್ಲಿ ಡಬ್ಲ್ಯುಟಿಒದ ಸ್ಥಾಪನೆಯಿಂದ ಗ್ಯಾಟ್‌ನ ರಚನೆಯೇ ಬದಲಾದಂತಾಗಿದೆ. ಬೌದ್ಧಿಕ ಸ್ವತ್ತಿನ ವ್ಯಾಪಾರ, ಸೇವೆಗಳ ಒಪ್ಪಂದಗಳು, ವ್ಯಾಪಾರ-ಸೇವೆಗಳ ಸಾಮಾನ್ಯ ಒಪ್ಪಂದ(ಜಿಎಟಿಎಸ್) ಮತ್ತು ವಿವಾದ ಪರಿಹಾರ ತಾಂತ್ರಿಕತೆ(ಡಿಎಸ್‌ಎಂ)ಗಳು ಗ್ಯಾಟ್‌ನ ಮುಖ್ಯ ಅಂಶಗಳು. ಇವುಗಳ ಜಾರಿ ಸಾರ್ವಜನಿಕರ ಬದುಕಿನಲ್ಲೂ ಪರಿಣಾಮಗಳನ್ನು ಪ್ರತಿಫಲಿಸಿದವು.

ಮುಖ್ಯವಾಗಿ, ಬಹುಪಾಲು ರಾಷ್ಟ್ರಗಳಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಕೂಗು ದೊಡ್ಡದಾಗಿ ಕೇಳಲಾರಂಭಿಸಿತು. ಇದು ಅಂತರ್ರಾಷ್ಟ್ರೀಯ ವಾತಾವರಣಕ್ಕೂ ಹಬ್ಬಿದ್ದು ಸಹಜ. ವ್ಯಾಪಾರ ವಹಿವಾಟು ಹೆಚ್ಚಿದಂತೆ ಬಹುಸಂಖ್ಯಾತ ನಾಗರಿಕರು ಇದರ ಪರಿಣಾಮಗಳನ್ನು ಎದುರಿಸುವಂತಾಯಿತು. ಕೊನೆ ಪಕ್ಷ, ಈ ಒಪ್ಪಂದಗಳ ಸ್ಪಷ್ಟ ಪ್ರಭಾವದ ಅಂದಾಜೂ ಸಿಕ್ಕಿತು. ಇದೇ ಕಾರಣದಿಂದಾಗಿ ಈ ರಹಸ್ಯ ಗ್ಯಾಟ್ ಕುರಿತು ಪ್ರಶ್ನೆಗಳು ಹೆಚ್ಚಿದವು. ನೀತಿಯ ವಿಚಾರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಂಘಟನೆಗಳು ಅಕ್ಷರಶಃ ಸಿದ್ಧವಾದವು.

ಸರ್ಕಾರೇತರ ಸಂಘಟನೆಗಳ ಅರಿವಿಗೆ ಬಂದಂತೆ, ಡಬ್ಲ್ಯುಟಿಒ ಮಾತುಕತೆಗಳಲ್ಲಿ ಪಾಲ್ಗೊಂಡ ಪ್ರತಿನಿಧಿಗಳು ಸಾರ್ವಜನಿಕ ಅಭಿಪ್ರಾಯಗಳನ್ನು ಅಸಮರ್ಪಕವಾಗಿ, ತಪ್ಪಾಗಿ ದಾಖಲಿಸತೊಡಗಿದ್ದರು. ಮುಖ್ಯ ವಿಚಾರಗಳ ಕುರಿತು ಸರ್ಕಾರೇತರ ಸಾರ್ವಜನಿಕ ಸಂಘಟನೆಗಳು ಡಬ್ಲ್ಯುಟಿಒ ಮಾತುಕತೆಗಳು ಬೇರೆಯದೇ ಆದ ದೃಷ್ಟಿಕೋನಗಳನ್ನು ಸಮರ್ಥವಾಗಿ ಮಂಡಿಸಬಲ್ಲವು. ಅಲ್ಲದೆ ರಾಷ್ಟ್ರೀಯ ಮಟ್ಟದಲ್ಲಿ ಆದ ಪ್ರಾತಿನಿಧ್ಯ ಕೊರತೆಯ ದೋಷ ಈ ಅವಕಾಶದಿಂದ ಸರಿದೂಗುತ್ತದೆ ಎಂಬುದು ಈ ಸಂಘಟನೆಗಳ ವಾದ.

ವಿಚಿತ್ರವೆಂದರೆ, ಬಹುಪಾಲು ಡಬ್ಲ್ಯುಟಿಒ ಸದಸ್ಯ ರಾಷ್ಟ್ರಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಹೊಂದಿದ್ದರೂ ವ್ಯಾಪಾರ ಮಾತುಕತೆಗಳು ಮಾತ್ರ ಪಾರದರ್ಶಕವಾಗಿರಲಿಲ್ಲ. ನಾಗರಿಕರನ್ನು ಬಿಡಿ, ಸರ್ಕಾರದ ಶಾಸಕ ವರ್ಗಕ್ಕೂ ಮಾತುಕತೆಗಳ ವಿವರ, ಬೇಕು ಬೇಡಗಳ ಮಾಹಿತಿ ಇರುವುದಿಲ್ಲ. ಈ ಹಿನ್ನೆಲೆಯಲ್ಲೂ ಸಾರ್ವಜನಿಕ ಪ್ರಾತಿನಿಧ್ಯ ಅತ್ಯಗತ್ಯ ಎನ್ನಿಸತೊಡಗಿತ್ತು.

ಡಬ್ಲ್ಯುಟಿಒನಲ್ಲಿ ಸಮತೋಲಿತ ವ್ಯವಸ್ಥೆ ಇರಬೇಕಾದುದು ಆದರ್ಶ. ಆದರೆ ಉದ್ಯಮ, ವ್ಯಾಪಾರ ವ್ಯವಹಾರಶಾಹಿಯ ಪ್ರಭಾವ ಡಬ್ಲ್ಯುಟಿಒ ಮಾತುಕತೆಗಳಲ್ಲಿ ಅತಿ ಹೆಚ್ಚು. ಸಮನ್ವಯ ನಿರ್ಮಾಣವಾಗಬೇಕಾದರೆ ನಾಗರಿಕ ಗುಂಪುಗಳ ಪ್ರಾತಿನಿಧ್ಯ ಬೇಕೇ ಬೇಕಾಗುತ್ತದೆ. ನಾಗರಿಕ ಸಮಾಜದ ಹಕ್ಕುಗಳು ಡಬ್ಲ್ಯುಟಿಒ ನಿಯಮಗಳಿಂದಾಗಿ ಉಲ್ಲಂಘನೆಯಾಗುವ ಅಪಾಯದ ಸಂಶಯ ಎದ್ದುಕಾಣುತ್ತಿತ್ತು. ಹೀಗಾಗಿ ನಾಗರಿಕ ಸಂಘಟನೆಗಳು ಡಬ್ಲ್ಯುಟಿಒನಲ್ಲಿ ತಮ್ಮ ಪ್ರಾತಿನಿಧ್ಯವನ್ನು ಒಪ್ಪಿಕೊಳ್ಳಬೇಕೆಂಬ ಒತ್ತಾಯವನ್ನು ಹೆಚ್ಚಿಸಿದವು.

ಸರ್ಕಾರೇತರ ಸಂಘಟನೆಗಳ ಬೆಳವಣಿಗೆ ಉಲ್ಲೇಖಾರ್ಹ. ಕಳೆದ ಕೆಲವು ದಶಕಗಳಿಂದ ಅವುಗಳ ಸಾಮರ್ಥ್ಯ, ಬೌದ್ಧಿಕ ಸಂಪನ್ಮೂಲ ಅದ್ಭುತವಾಗಿ ಅಭಿವೃದ್ಧಿಯಾಗಿದೆ. ಹಿಂದಿನ ದಿನಗಳಂತೆ ಅವು ಈಗ ಕೇವಲ ಸಾಮಾಜಿಕ ಸೇವಾ ಕಾರ್ಯಕರ್ತರಾಗಿ ನಿಂತಿಲ್ಲ. ಡಬ್ಲ್ಯುಟಿಒ ನಂತ ಗಂಭೀರ ವಿಚಾರದಲ್ಲೂ ಪಾಲ್ಗೊಳ್ಳಬಹುದಾದ ಎಲ್ಲ ತಿಳುವಳಿಕೆ, ಪರಿಣತಿ ಹಾಗೂ ತಾಂತ್ರಿಕತೆಗಳನ್ನು ಅಳವಡಿಸಿಕೊಂಡಿವೆ. ಉದಾಹರಣೆಗೆ ಓಕ್ಸ್‌ಫ್ಯಾಮ್, ಆ್ಯಕ್ಷನ್ ಎಯಿಡ್, ವರ್ಲ್ಡ್ ಡೆವಲಪ್‌ಮೆಂಟ್ ಮೂವ್‌ಮೆಂಟ್, ಫೋರಮ್ ಆಫ್ ಗ್ಲೋಬಲ್ ಸೌತ್, ನ್ಯೂಯಾರ್ಕ್ ಇಂಟರನ್ಯಾಷನಲ್, ಕನ್ಸ್ಯೂಮರ್ ಯೂನಿಟಿ, ಟ್ರಸ್ಟ್ ಸೊಸೈಟಿ ಮುಂತಾದ ಎನ್‌ಜಿಒಗಳು ಡಬ್ಲ್ಯುಟಿಒ ಮಾತುಕತೆಗಳನ್ನು ಪ್ರಭಾವಿಸುವ ತಾಕತ್ತು ಹೊಂದಿವೆ.

ಅಲ್ಲದೆ ಸಾರ್ವಜನಿಕ ಸಂಘಟನೆಗಳು ಈಗ ಒಂದಕ್ಕೊಂದು ಕೊಂಡಿ ಹೊಂದಿವೆ. ಮಾಹಿತಿಗಳನ್ನು ಹಂಚಿಕೊಳ್ಳುತ್ತಿವೆ. ಚರ್ಚೆ ನಡೆಸುತ್ತಿವೆ. ಈ ಹೊಂದಾಣಿಕೆ ಮತ್ತು ಆಧುನಿಕ ತಾಂತ್ರಿಕತೆಗಳ ನೆರವಿನಿಂದ ಸರ್ಕಾರೇತರ ಸಂಘಟನೆಗಳು ಪ್ರಭಾವಯುತವಾಗಿ ಮತ್ತು ನಾಜೂಕಾಗಿ ವ್ಯವಹರಿಸಬಲ್ಲವು. ಇದೂ ಕೂಡ ಡಬ್ಲ್ಯುಟಿಒನಲ್ಲಿ ಪಾರದರ್ಶಕತೆ, ಸಾರ್ವಜನಿಕ ಪ್ರಾತಿನಿಧ್ಯಕ್ಕೆ ಸರ್ಕಾರೇತರ ಸಂಘಟನೆಗಳು ಒತ್ತಾಯಿಸಲು ಕಾರಣ.

ಡಬ್ಲ್ಯುಟಿಒ ಕೂಡ ಈ ವಿಚಾರಕ್ಕೆ ವಿರೋಧವಾಗಿಯೇನೂ ನಿಂತಿರಲಿಲ್ಲ. 1998ರ ಜಿನಿವಾ ಸಚಿವ ಪ್ರಕಟನೆಯಲ್ಲಿಯೇ ಡಬ್ಲ್ಯುಟಿಒ ಸಾರ್ವಜನಿಕರ ಪ್ರಾತಿನಿಧ್ಯದ ಪ್ರಾಮುಖ್ಯತೆಯನ್ನು ವ್ಯಕ್ತಪಡಿಸಿದ್ದು ಕಾಣುತ್ತದೆ. ಪ್ರತಿನಿಧಿಗಳ ಪ್ರಕಾರ, 'ಅವರು ಡಬ್ಲ್ಯುಟಿಒ ವ್ಯವಹಾರಗಳಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಲು ಮತ್ತು ವ್ಯಾವಹಾರಿಕ ಬೆಳವಣಿಗೆ ಕಂಡುಕೊಳ್ಳಲು ಮತ್ತು ಸುರಕ್ಷಿತ ಅಭಿವೃದ್ಧಿ ಕಾಪಾಡಲು' ಕ್ರಮಗಳನ್ನು ಸೂಚಿಸಲು ಆಹ್ವಾನಿಸಿದ್ದರು. 1998ರ ಮೇ ನಂತರ ದಾಖಲೆಗಳ ಬಹಿರಂಗಕ್ಕೆ ಮತ್ತು ನಾಗರಿಕ ಸಂಘಟನೆಗಳ ಪ್ರಕಟನೆಗಳನ್ನು ಪ್ರಸಾರ ಮಾಡಲು ಖುದ್ದು ಡಬ್ಲ್ಯುಟಿಒ ಉತ್ಸುಕವಾಗಿದೆ.

ಡಬ್ಲ್ಯುಟಿಒ ಒಪ್ಪಂದಗಳಲ್ಲೂ ಸಾರ್ವಜನಿಕ ಪ್ರಾತಿನಿಧ್ಯವನ್ನು ಪ್ರಸ್ತಾಪಿಸಲಾಗಿದೆ. ವ್ಯಾಪಾರದ ತಾಂತ್ರಿಕ ಅಡೆತಡೆಗೋಲು ಒಪ್ಪಂದ(ಅಗ್ರಿಮೆಂಟ್ ಆಫ್ ಟೆಕ್ನಿಕಲ್ ಬ್ಯಾರಿಯರ್ಸ್ ಟ್ರೇಡ್)ದ ಅನ್ವಯ, ನೋಟಿಫಿಕೇಷನ್ ನಂತರವೇ ಕಾಯ್ದೆ ಜಾರಿಗೆ ಬರುತ್ತದೆ. ಅಂದರೆ ಆಸಕ್ತ ಪಕ್ಷಗಳು ಪೂರ್ಣ ಮಾಹಿತಿ ಹೊಂದಿರಬೇಕು ಎಂಬ ಅರ್ಥವತ್ತಾದ ನಿಲುವು ಹಿನ್ನೆಲೆಯಲ್ಲಿದೆ.

ಇದೇ ಮಾದರಿಯನ್ನು ನಾವು ಬೌದ್ಧಿಕ ಆಸ್ತಿ ಹಕ್ಕು ವ್ಯಾಪಾರ ಒಪ್ಪಂದ, ಸಬ್ಸಿಡಿ ಮತ್ತು ಸಮನ್ವಯ ಮಾರ್ಗಗಳ ಒಪ್ಪಂದಗಳಲ್ಲೂ ಕಾಣಬಹುದು. ಡಬ್ಲ್ಯುಟಿಒ ಒಪ್ಪಂದಗಳಿಗೆ ಸಂಬಂಧಿಸಿದಂತೆ ಸದಸ್ಯ ರಾಷ್ಟ್ರಗಳು ಪ್ರಕಟನೆಗಳನ್ನು ಹೊರಡಿಸಿ ಜನರ ಆಕ್ಷೇಪಗಳನ್ನು ಆಲಿಸುವ ವ್ಯವಸ್ಥೆ ಮಾಡಲಾಗಿದೆ.

ವಿವಾದ ಪರಿಹಾರ ವ್ಯವಸ್ಥೆ(ಡಿಎಸ್ಎಂ)ನಲ್ಲೂ ಸರ್ಕಾರೇತರ ಸಂಘಟನೆ ಪಾಲ್ಗೊಳ್ಳಲು ಅವಕಾಶವಿದೆ. ಅಂತದೊಂದು ನಿಯಮ ಡಿಎಸ್ಎಂ ಒಳಗೇ ಇದೆ. ಈ ಸಮಿತಿ ಸದಸ್ಯ ರಾಷ್ಟ್ರಗಳ ನಡುವಿನ ವಿಚಾರಗಳನ್ನು ವಿಚಾರಣೆಗೆ ತೆಗೆದುಕೊಳ್ಳುತ್ತದೆ. ಇದು ಮಾಹಿತಿಯನ್ನು ಸೂಕ್ತ ಮೂಲದಿಂದ ಪಡೆಯಬಹುದು ಅಥವಾ ಪರಿಣತರನ್ನು ಸಂಪರ್ಕಿಸಬಹುದು. ಈ ವ್ಯವಸ್ಥೆಯಲ್ಲಿ ನಾಗರಿಕ ಸಂಘಟನೆಗಳ ಪಾಲ್ಗೊಳ್ಳುವಿಕೆಯನ್ನು ಕಡ್ಡಾಯಗೊಳಿಸಿದ್ದರೆ ಇನ್ನೂ ಹೆಚ್ಚಿನ ಪರಿಣಾಮ ಕಾಣಲು ಸಾಧ್ಯ ಎಂಬುದು ಎನ್‌ಜಿಒಗಳ ಅಭಿಪ್ರಾಯ.

ಪ್ರಸ್ತುತ ಬಹುಪಾಲು ಸಂಘಟನೆಗಳು ಡಬ್ಲ್ಯುಟಿಒವನ್ನು ಪುನರ್ರಚಿಸಿ ಅದನ್ನು ಇನ್ನಷ್ಟು ಪಾರದರ್ಶಕ ಹಾಗೂ ನಾಗರಿಕಸ್ನೇಹಿಯನ್ನಾಗಿಸಬೇಕೆಂದು ಒತ್ತಾಯಿಸುತ್ತಿವೆ. ಅಮೆರಿಕದ ವಿಶ್ವ ವ್ಯವಹಾರದ ಅಧೀನ ಕಾರ್ಯದರ್ಶಿ **ಫ್ರಾಂಕ್** ಲೇ ಡಬ್ಲ್ಯುಟಿಒನಲ್ಲಿ ಆರು ಬದಲಾವಣೆಗಳಿಗೆ ಒತ್ತಾಯಿಸಿದ್ದಾರೆ. ಅವುಗಳೆಂದರೆ,

1. ನಾಗರಿಕರೊಂದಿಗೆ ಮಾಹಿತಿ ವಿನಿಮಯ ಹಾಗೂ ಹೆಚ್ಚಿನ ಚರ್ಚೆಗೆ ನೂತನ ಪರಾಮರ್ಶೆಯ ತಾಂತ್ರಿಕತೆಯನ್ನು ಜಾರಿಗೊಳಿಸುವುದು
2. ಸಾರ್ವಜನಿಕ ಜಾಗೃತಿ ಮೂಲಕ ಈ ವ್ಯವಸ್ಥೆ, ಅದರ ಕೆಲಸಕ್ಕೆ ಒತ್ತಾಸೆಯಾಗಿ ನಿಲ್ಲುವುದು
3. ಸರ್ಕಾರದ ಆಂತರಿಕ ವಿಭಾಗಗಳ ನಡುವೆ ಸಂಬಂಧ ಬೆಳೆಯಲು ಉತ್ತೇಜಿಸುವುದು
4. ವೈವಿಧ್ಯಮಯ ದಾಖಲೆಗಳ ಸಕಾಲಿಕ ಪರಿಶೀಲನೆಗೆ ಅವಕಾಶ
5. ಅಮಿಕಸ್ ಕ್ಯೂರಿ ಬ್ರೀಫ್‌ಗಳ ದಾಖಲಿಸಲು ಅವಕಾಶ ಕಲ್ಪಿಸುವುದು
6. ಡಬ್ಲ್ಯುಟಿಒ ವಿವಾದಗಳ ವಿಚಾರಣೆಯನ್ನು ಮುಕ್ತವಾಗಿ ನಿರ್ವಹಿಸುವುದು

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:**

ಗ್ರಾಹಕ ಹಕ್ಕು ಶಿಕ್ಷಣ ಮತ್ತು ಜಾಗೃತಿ ದತ್ತಿ (ಕ್ರಿಯೇಟ್), 239, ೮ನೇ 'ಸಿ' ಮುಖ್ಯರಸ್ತೆ, ರೆಮ್ಕೋ ಬಡಾವ ವಿಜಯನಗರ, ಬೆಂಗಳೂರು – 560 040, ಭಾರತ. ದೂರವಾಣಿ:91-80-2335780, **ಇ ಮೇಲ್** **creatorg@sify.com Website: creatindia.org**

ಭಾವಾನುವಾದ **–ಮಾ.ವೆಂ.ಸ.ಪ್ರಸಾದ್**

**ಮಾವಿನಸರ**

**ಪೋಸ್ಟ್–ಎಡಜಿಗಳೇಮನೆ**

**ಸಾಗರ ತಾ. ಶಿವಮೊಗ್ಗ ಜಿ.**

**577401**

**ಫೋನ್ 08183 236068,296543, 9886407592**

**ಇ ಮೇಲ್– mavemsa@gmail.com**